ಅಂಬೊ ಜೋಡುಶಬ್ದವನ್ನು ಅನೇಕ ಜನ ಅನೇಕ ರೀತಿಯಲ್ಲಿ ಬಳಸುವದುಂಟು. ಹೀಗೆ ಬಳಸಿ ತಮ್ಮ ಕೆಲಸ ಸಾಧಿಸಿಕೊಳ್ಳುವಲ್ಲಿಯೂ ಜಾಣತನವಿದೆ. ಹಟಮಾಡುವ ಕಂದಮ್ಮಗಳಿಗೆ, 'ನಿನ್ನ ಪೋತರಾಜನ ಕೈಯಿಗೇ ಕೊಡುತ್ತೇನೆ ನೋಡು' ಎಂದು ತಾಯಿ ಹುಸಿಬೆದರಿಕೆ ಹಾಕುವುದಿಲ್ಲವೆ! ಹೀಗೆಯೆ ಹೇಳುತ್ತ ಹೋದಲ್ಲಿ, ಉಲಕೋಚಿ ಮಂದಿ, ಉಸಾಬರಿ ಮಾಡುವವರು, ಉಡಾಫೆ ಸ್ವಭಾವದವರು, ಮತ್ತೊಬ್ಬರನ್ನು ಉಪೇಕ್ಷಿಸುವ ಅಹಂಕಾರಿಗಳು ಕಾಣಸಿಗುತ್ತಾರೆ. ಇಲ್ಲಿ ಉತ್ತರಕುಮಾರನಂಥ ಬಡಾಯಿಕೋರರೂ ಇದ್ದಾರೆ. ಅದರಂತೆ, ಬೂಟಾಟಿಕೆಯ ಬಂಟರಿಗೂ ಹೊಗಳುಭಟ್ಟರಿಗೂ 'ಹಂಗೇ ಅಂತಿರತಾರ' ಎಂಬ ಹಣೆಪಟ್ಟಿ ಅಂಟಿಸಬಹುದಲ್ಲವೆ!

ಎರಡೂ ಕಾಲುಗಳಿಲ್ಲದ ವ್ಯಕ್ತಿಯೊಬ್ಬನಿದ್ದನಂತೆ. ಆತನಿಗೆ ದಾರಿಯ ಸುಂಕ ವಸೂಲಿ ಮಾಡುವ ಕೆಲಸ ವಹಿಸಲಾಗಿತ್ತು. ತನ್ನ ಕಾರ್ಯಾಲದಲ್ಲಿ ಕುಳಿತು, ಹೋಗಿಬರುವ ಕರಗಳ್ಳರಿಗೆ 'ಏಳಬಾರ್ದ ನಾ, ಎದ್ದು ಬಂದನೀ ಅಂದ್ರ, ನೀವಾರೂ ಉಳಿಯಾಕಿಲ್ಲ' ಎಂದು ಹೆದರಿಸುತ್ತಿದ್ದನಂತೆ. ಆತನ ಮಾತಿಗೆ ಹೆದರಿ, ಎಲ್ಲರೂ ಅವನಿದ್ದಲ್ಲಿಗೆ ಬಂದು ಸುಂಕಕಟ್ಟಿ ಹೋಗುತ್ತಿದ್ದರಂತೆ. 'ಈತನಿಗೆ ಕಾಲುಗಳಿಲ್ಲ, ಎದ್ದು ಬರಾಕ ಆಗಾಂಗಿಲ್ಲಾ, ಬರೇ ಹಂಗೇ ಅಂತಿರತಾನ' ಅನ್ನುವ ಸಂಗತಿ ಕೊನೆವರೆಗೂ ಯಾರಿಗೂ ತಿಳಿದಿರಲಿಲ್ಲವಂತೆ.

ಕೋಲೆಬಸವನನ್ನು ಕರೆದುಕೊಂಡು ಮನೆ ಮನೆಗೆ ಬರುತ್ತಿದ್ದಾತ, 'ನನ್ನ ಈ ಕೋಟು ಶಿವಾಪುರದ ಗೌಡ್ರು ಕೊಟ್ಟಾರ, ಈ ರುಮಾಲ ಪೇಟಾ ಬನಹಟ್ಟಿ ಸಾಹುಕಾರ್ರು ಕೊಟ್ಟಾರ' ಎಂದು ರಾಗಬದ್ಧವಾಗಿ ಹೇಳುತ್ತಿರುತ್ತಾನೆ. ಆತನ ಪ್ರತಿ ಮಾತಿಗೆ ಅವನ ಹೆಂಡತಿ ಮೆಲುಧ್ವನಿಯಲ್ಲಿ ಹೇಳುತ್ತಿರುತ್ತಾಳೆ: 'ತಾನೆ ತಂದಾನ... ತಾನೇ ತಂದಾನ' ಅಂತ. ಆಕೆಯ ಮಾತಿನ ಅರ್ಥ: 'ಇಂವಾ ಹಂಗೇ ಅಂತಿರತಾನ, ನಂಬಬ್ಯಾಡ್ರಿ' ಎಂಬುದಾಗಿತ್ತು!



ರಾಜ ಮಹಾರಾಜರು ನಮ್ಮನ್ನು ಆಳುತ್ತಿದ್ದ ಕಾಲದಲ್ಲಿದ್ದ ಹೊಗಳುಭಟ್ಟರು ಉದ್ಗರಿಸುತ್ತಿದ್ದ ಪರಾಕು ಪದಗಳಲ್ಲಿ ಕಾಳಿಗಿಂತ ಜೊಳ್ಳೇ ತುಂಬಿರುತ್ತಿತ್ತಲ್ಲವೆ? 'ಉದ್ದಂಡ ಪ್ರಚಂಡ, ಮೂರುಲೋಕದ ಗಂಡ, ಕ್ಷಾತ್ರತೇಜ, ವೀರಾಗ್ರಣಿ, ರಣಧೀರ, ವೀರಾಧಿವೀರ' ಎಂದೆಲ್ಲ ಹೊಗಳಿಸಿಕೊಳ್ಳುತ್ತಿದ್ದ ಅರಸು ವಂಶದ ಕುಡಿಗಳಲ್ಲಿ ಬಹಳಷ್ಟು ಮಂದಿ ರಣಹೇಡಿಗಳೆ ಆಗಿರುತ್ತಿದ್ದರು.